ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 05.01.2026

ಪಾಟೀಸವಾಲು ಪ್ರತಿವಾದಿಯರ ಪರ ಶ್ರೀ ಪಿ ಹೆಚ್ ಎ ವಕೀಲರಿಂದಃ

ಕುಷ್ಟಗಿ ನಗರದ ಮದ್ದಾನ್ಯಪ್ಪ ಪಟ್ಟಣಶೆಟ್ಟಿರವರ ಪರಿಚಯ ನನಗೆ ಇರುವುದಿಲ್ಲ. ವಾದಿಗಳ ತಂದೆ ಗುರುಸಿದ್ದಪ್ಪರವರು 4 ಜನ ಅಣ್ಣ ತಮ್ಮಂದಿರು ಇರುತ್ತಾರೆ. ಅವರೆಂದರೆ ಶರಣಪ್ಪ , ಗುರುಸಿದ್ದಪ್ಪ ರವರ ಹೆಸರುಗಳು ಗೊತ್ತಿರುತ್ತದೆ. ಉಳಿದವರ ಹೆಸರುಗಳು ಗೊತ್ತಿರುವುದಿಲ್ಲ. ಸದರಿ 4 ಜನ ಸಹೋದರರು ಯಾವಾಗ ವಿಭಾಗ ಆಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ಗುರುಸಿದ್ದಪ್ಪ ನೀಡಿರುತ್ತಾರೆ. ಸಾಕ್ಷಿ ಮುಂದುವರೆದು ನನಗೆ ಗೊತ್ತಿರುವುದನ್ನು ಮತ್ತು ಗುರುಸಿದ್ದಪ್ಪರವರು ಹೇಳಿರುವುದನ್ನು ಹೇಳಿರುತ್ತೇನೆ ಎಂದು ನುಡಿದಿರುತ್ತಾರೆ.

ಈ ದಾವೆಯನ್ನು ಗುರುಸಿದ್ದಪ್ಪನ ಮಕ್ಕಳು ಬಸಪ್ಪನ ಮಕ್ಕಳ ವಿರುದ್ದ ಸಲ್ಲಿಸಿರುತ್ತಾರೆ. ಈ ದಾವೆಯನ್ನು 5 ಚಿಲ್ಲರೆ ಎಕರೆ ಜಮೀನಿನ ಕುರಿತು ಸಲ್ಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಜಮಿನಿನ ಸರ್ವೆ ನಂ. 370/2 ಇರುತ್ತದೆ. ಸದರಿ ಜಮೀನು ಕುಷ್ಟಗಿ ಸೀಮಾದಲ್ಲಿ ಬರುತ್ತದೆ. ಸದರಿ ಜಮೀನಿನ ಚಕ್ಕಬಂದಿ ನನಗೆ ಹೇಳಲು ಬರುವುದಿಲ್ಲ. ನನ್ನ ಸ್ವಂತ ಗ್ರಾಮ ಬೆನಕನಾಳ ಇರುತ್ತದೆ. ನಮ್ಮ ಗ್ರಾಮವು ಕುಷ್ಟಗಿಯಿಂದ 18 ಕಿ.ಮಿ ಅಂತರದಲ್ಲಿರುತ್ತದೆ. ನಾನು ಮೂಲತಹಃ ಗೌಂಡಿ ಮತ್ತು ಕಟ್ಟಡ ನಿರ್ಮಾಣದ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವ್ಯವಸಾಯ ಮಾಡುತ್ತೇನೆ ಎಂದು ನುಡಿಯುತ್ತಾರೆ, ಈ ಕುರಿತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ

ಜಮೀನಿಗೆ ಸುಮಾರು 30 ವರ್ಷಗಳಿಂದ ಕೂಲಿ ಕೆಲಸ ಮಾಡಲು ಮತ್ತು ಒಕ್ಕಲುತನ ಮಾಡಲು ಬರುತ್ತಿದ್ದೆನು ಎಂದು ನುಡಿಯುತ್ತಾರೆ. ವಾದಿಗಳ ಮಾತು ಕೇಳಿ ದಾವಾ ಸ್ವತ್ತು ವಿಭಾಗದಲ್ಲಿ ವಾದಿಗಳ ತಂದೆಯ ಭಾಗಕ್ಕೆ ಬಂದಿತ್ತು ಎಂದು ಸುಳ್ಳು ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ಬಳಿ ಎತ್ತುಗಳು ಇಲ್ಲದೆ ಇದ್ದರು ವಾದಿಗಳ ಜಮೀನಿಗೆ ಒಕ್ಕಲುತನ ಮಾಡಲು ಬರುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ವಾದಿಗಳು ದಾವಾ ಸ್ವತ್ತಿನ ಸ್ವಾಧೀನದಾರರು ಮತ್ತು ಕಬ್ಜಾದಾರರು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾಧೀನದಾರರು ಮತ್ತು ಕಬ್ಜಾದಾರರು ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾಧೀನದಾರರು ಇದ್ದರು ಕೂಡಾ ವಾದಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ನಾನು ಯಾವತ್ತೂ ಒಕ್ಕಲುತನ ಮಾಡಲು ಹೋಗಿಲ್ಲ ಎಂದರೆ ಸರಿಯಲ್ಲ. 30 ವರ್ಷದಿಂದ ದಾವಾ ಸ್ವತ್ತಿನಲ್ಲಿ ಒಕ್ಕಲುತನ ಮಾಡಲು ಹೋಗುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ